# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**
**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್, 3ನೇ**
**ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

**ದಿನಾಂಕ:05-12-2020**

**ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/ /2020-21**

## ದಿನಾಂಕ:05/12/2020 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ

## ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:05-12-2020ರಂದು ಬೆಳ್ಳಿಗೆ 11:00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಗಾಳಿಆಂಜನೇಯ ದೇವಸ್ಥಾನ)ದಲ್ಲಿ ನಡೆದಿರುತ್ತದೆ. ಸಭೆಯ ನಡವಳಿಗಳು ಈ ಕೆಳಕಂಡಂತೆ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಸಹಾಯಕ ಕಾನೂನು ಅಧಿಕಾರಿ, ಕಾನೂನು ಕೋಶ | ಹಾಜರಾಗಿರುತ್ತಾರೆ. |
| 2 | ಶ್ರೀ ಕೃಷ್ಣಮೂರ್ತಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ.ಸುರೇಶ್ | ಸದಸ್ಯರು | ಕಂದಾಯ ಪರಿವೀಕ್ಷಕರು | ಹಾಜರಾಗಿರುತ್ತಾರೆ. |
| 5 | ಶ್ರೀಮತಿ ವಾಣಿ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 6 | ಶ್ರೀ.ಗಂಗಣ್ಣಯ್ಯ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುತ್ತಾರೆ. |

05/12/2020

| | | | | |
|---|---|---|---|---|
| 7 | ಶ್ರೀ ಸಿ.ಹೆಚ್.ಪೈ | ಸದಸ್ಯರು | ಚೇರಮನ್ ಸ್ಕೈಲೈನ್ ಸಿಟಿ ಅಪಾರ್ಟ್‌ಮೆಂಟ್ | ಹಾಜರಾಗಿರುತ್ತಾರೆ. |
| 8 | ಶ್ರೀ.ಎನ್.ನಾರಾಯಣ ರಾವ್ | ಸದಸ್ಯರು | ಅಧ್ಯಕ್ಷರು ಚಂದ್ರಾ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ | ಹಾಜರಾಗಿರುತ್ತಾರೆ. |
| 9 | ಶ್ರೀ.ಜಗನಾಥ್ | ಸದಸ್ಯರು | ಕಿರಿಯ ಅಭಿಯಂತರರು(ಬೆಸಕಾಂ) | ಹಾಜರಾಗಿರುತ್ತಾರೆ. |
| 10 | ಶ್ರೀ.ಕೃಷ್ಣಪ್ಪ | ಸದಸ್ಯರು | BWSSB | ಹಾಜರಾಗಿರುತ್ತಾರೆ. |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:05-12-2020ರಂದು ಸಭೆಯ ಸೂಚನಾ ಪತ್ರವನ್ನು ಈ ಕೆಳಕಂಡ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ಹಾಗೂ ಸಹಾಯಕ ಕಾನೂನು ಅಧಿಕಾರಿ ರವರು ದಿನಾಂಕ:23-11-2020 ರಂದು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸಭೆಯಲ್ಲಿ ಓದಲಾಯಿತು.

ಸಭೆಯಲ್ಲಿ ಶ್ರೀ.ಹೆಚ್.ಪೈ ರವರು ಸ್ಕೈಲೈನ್ ಅಪಾರ್ಟ್‌ಮೆಂಟ್ ಮುಂದುಗಡೆ ನಿಂತಿರುವ ವಿದ್ಯಾ ಸಾಗರ್ ಸ್ಕೂಲ್ ವ್ಯಾನ್ ಅನ್ನು ಈ ಹಿಂದಿನ ಸಭೆಯಲ್ಲಿ ತೆರವುಗೊಳಿಸಿರುವುದಾಗಿ ಎಂದು ತಿಳಿಸಿದ್ದರು. ಆದರೆ ವಾಸ್ತವವಾಗಿ ಸದರಿ ಸ್ಕೂಲ್ ವ್ಯಾನ್ ಇಂದಿನ ವರೆಗೂ ನಿಂತಿರುವುದನ್ನು ತಿಳಿಸುತ್ತಾ ತೆರವುಗೊಳಿಸಲು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಹಾಗೂ ಸದರಿ ವ್ಯಾನ್‌ನಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದನ್ನು ಗಮನಕ್ಕೆ ತಂದು ಈ ಕೂಡಲೇ ತೆರವುಗೊಳಿಸಲು ಕೋರಿಕೊಂಡಿರುತ್ತಾರೆ. ಈ ವಿಷಯದಲ್ಲಿ ಚಂದ್ರಾಬಡಾವಣೆ ಪೊಲೀಸ್ ಠಾಣೆ ನಿಯಮಾನುಸಾರವಾಗಿ ಕ್ರಮಜರೂಗಿಸಲು ಸಭೆ ಕೋರಿದೆ.

1. **ಕೋವಿಡ್-19**: ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ಸವಿಸ್ತಾರವಾಗಿ ತಿಳಿಸಿರುತ್ತಾರೆ. ಮುಂದುವರೆದು ವಾರ್ಡ್ ಪ್ರದೇಶದ ಸಾರ್ವಜನಿಕರಿಗೆ ಕೋವಿಡ್-19ರ ಪರೀಕ್ಷೆ ಹೆಚ್ಚು ಮಾಡುವಂತೆ ಸೂಚಿಸಲಾಯಿತು. ಪ್ರತಿದಿನ ಇದಲ್ಲದೇ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವೈದ್ಯಾಧಿಕಾರಿಗಳು ಕೋರೊನ ಟೆಸ್ಟಿಂಗ್ ಕ್ಯಾಂಪ್ ನಡೆಸಲು ಗಾಳಿಆಂಜನೇಯ ದೇವಸ್ಥಾನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯ ಒಂದನೇ ಮಹಡಿಯನ್ನು ಆರೋಗ್ಯ ಇಲಾಖೆಗೆ ನೀಡಲು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಕ್ರಮಜರೂಗಿಸಲು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132 ರವರಿಗೆ ಸಭೆಯು ಸೂಚಿಸಿದೆ.

05/12/2020

ಸದರಿರವರ ಮನವಿಯನ್ನು ಪತ್ರದ ಮುಖಾಂತರ ನೀಡಲು ಕೋರಲಾಗಿರುತ್ತದೆ. ಹಾಗೂ ಸಹಾಯಕ ಅಭಿಯಂತರರು ಆರೋಗ್ಯ ಇಲಾಖೆಯ ಮನವಿಯನ್ನು ಜಂಟಿ ಆಯುಕ್ತರು(ದಕ್ಷಿಣ)ರವರ ಆದೇಶಕ್ಕಾಗಿ ಕಳುಹಿಸಿಕೊಡಲು ಮತ್ತೊಮ್ಮೆ ಸೂಚಿಸಲಾಗಿರುತ್ತದೆ.

ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಕೋರನಾ ಟೆಸ್ಟಿಂಗ್‌ನ್ನು ಪ್ರತಿದಿನ 50 ರಿಂದ 80 ಜನರಿಗೆ ಮಾಡಲಾಗುತ್ತಿರುವುದನ್ನು ತಿಳಿಸಿರುತ್ತಾರೆ. ಪಾಸಿಟೀವ್ ಪ್ರಕರಣಗಳು ತುಂಬಾ ಕಡಿಮೆ ಆಗಿರುವುದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

2. **ಘನತ್ಯಾಜ್ಯ ನಿರ್ವಹಣೆ:** ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡುತ್ತಾರೆ. ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು. ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಮತ್ತು ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುವ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಈ ಹಿಂದಿನ ಸಭೆಯಲ್ಲಿ ತಿಳಿಸಿ ಸೂಚಿಸಲಾಗಿತ್ತು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ಕಾರ್ಯವನ್ನು ಮಾಡಿರುವುದಿಲ್ಲ. ಆದ್ದರಿಂದ ವಾರ್ಡ್‌ನಲ್ಲಿ ದಿನಾಲು ಕೆಲಸಕ್ಕೆ ಹಾಜರಾಗುವ ಪೌರಕಾರ್ಮಿಕರ ಮತ್ತು ಟಿಪ್ಪರ್ ಸಂಖ್ಯೆಯನ್ನು ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಸಭೆಯು ಸೂಚಿಸಿದೆ.

ವಿಲೇಜ್ ಹೈಪರ್ ಎದುರುಗಡೆ ಇರುವ ಕಾರ್ನರ್ ಖಾಲಿ ನಿವೇಶನದಲ್ಲಿ ಸಾಕಷ್ಟು ಘನತ್ಯಾಜ್ಯ ಕಸ ಸಂಗ್ರಹವಾಗುತ್ತಿದ್ದು ಅದನ್ನು ತೆರವುಗೊಳಿಸಲು ಸ್ಕೈ ಲೈನ್ ಅಪಾರ್ಟ್‌ಮೆಂಟ್ ನ ಅಧ್ಯಕ್ಷರು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಗಂಗಣ್ಣಯ್ಯ ರವರು ಖಾಲಿ ನಿವೇಶನದ ಮಾಲೀಕರು ಕಸ ತೆರವುಗೊಳಿಸಲು ಬಿಡುತ್ತಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಖಾಲಿ ನಿವೇಶನದಲ್ಲಿ ಸಂಗ್ರಹವಾಗಿರುವ ಘನ ತ್ಯಾಜ್ಯವನ್ನು ಪೊಲೀಸರ ಸಹಾಯ ಪಡೆದು ತೆರವುಗೊಳಿಸಲು ಸಭೆಯು ಸೂಚಿಸಿರುತ್ತದೆ. ಹಾಗೂ ಸಭೆಯು ಪೊಲೀಸ್ ಇಲಾಖೆಯ ಸಹಾಯವನ್ನು ಒದಗಿಸಲು ಕೋರಿದೆ.

ಕಿರಿಯ ಆರೋಗ್ಯ ಪರಿವೀಕ್ಷಕರು ಮನೆಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ತ್ಯಾಜ್ಯವನ್ನು ವಿಂಗಡಿಸಿ, ನೀಡುತ್ತಿರುವ ಬಗ್ಗೆ ಪ್ರತಿದಿನ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಕಾಲಕಾಲಕ್ಕೆ ಘನತ್ಯಾಜ್ಯ ನಿರ್ವಹಣೆ ಮಾಹಿತಿಯನ್ನು ನೋಡಲ್ ಅಧಿಕಾರಿ ಗಮನಕ್ಕೆ ತರಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯು ಸೂಚಿಸಿದೆ.

3. **ವಾರ್ಡ ಮಟ್ಟದ ಕಾಮಗಾರಿ:** ಸದಸ್ಯರಾದ ಶ್ರೀ.ಸಿ.ಹೆಚ್.ಪೈ ರವರು ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಮುಂದಿನ ಪಾರ್ಕನಲ್ಲಿ ಶಿಥಿಲಾವಸ್ಥೆಯಲ್ಲಿರುವ ಪೇ & ಯುಸ್ ಶೌಚಾಲಯವನ್ನು ನವೀಕರಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಳಸಲು ಅವಕಾಶ ಕಲ್ಪಿಸಬೇಕೆಂದು ಕೋರಿಕೊಂಡಿರುತ್ತಾರೆ. ಇದಲ್ಲದೆ ಈ ಹಳೆಯ ಶೌಚಾಲಯದಲ್ಲಿ ಸಾರ್ವಜನಿಕರು ಹೋಗದೇ ರಸ್ತೆಯ ಬದಿಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕೆಂದು

04/12/2020

ಕೋರಿರುತ್ತಾರೆ. ಸದರಿ ಸದಸ್ಯರ ಮನವಿಯನ್ನು ಪರಿಗಣಿಸಿ, ಸ್ಥಳ ಪರಿಶೀಲನೆ ಮಾಡಿ ಮುಂದೆ ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರು 132 ರವರಲ್ಲಿ ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು. ಸಹಾಯಕ ಅಭಿಯಂತರರು ತಮಗೆ ವಹಿಸಿರುವ ಈ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ವರದಿಯನ್ನು ಮುಂದಿನ ಸಭೆಗೆ ನೀಡಲು ಕೋರಿದೆ.

ಮುಂದುವರೆದು ಮಾನ್ಯ ಆಯುಕ್ತರು ದಿನಾಂಕ:05-12-2020ರಂದು ನಡೆಯುವ ವಾರ್ಡ್ ಸಮೀತಿ ಸಭೆಯಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಫುಟ್‌ಪಾತ್‌ಗಳ ನಿರ್ಮಾಣಕ್ಕಾಗಿ ಸೂಕ್ತ ಜಾಗವನ್ನು ಗುರುತಿಸಲು ಹಾಗೂ ಪಾದಾಚಾರಿ ರಸ್ತೆಗಳು ಹಾಳಾಗಿರುವುದನ್ನು ಗುರುತಿಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ವಿಷಯದ ಕುರಿತಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ಸಾರ್ವಜನಿಕರ ಶೌಚಾಲಯಗಳನ್ನು ನಿರ್ಮಾಣ ಮಾಡಲು ಹಾಗೂ 2021-2022ರ ಸಾಲಿನ ಮುಂಗಡ ಪತ್ರದಲ್ಲಿ ಸೇರಿಸಲು ಸೂಕ್ತ ಸ್ಥಳಗಳನ್ನು ಗುರುತಿಸಲು ಕೋರಲಾಗಿರುತ್ತದೆ. ನಾಗರಿಕ ಪ್ರತಿನಿಧಿಗಳು ಸಲ್ಲಿಸಿರುವ ಸ್ಥಳಗಳನ್ನು ಪರಿವೀಕ್ಷಣೆ ಮಾಡಿ ವರದಿ ಸಲ್ಲಿಸಲು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132ರವರಿಗೆ ಸಭೆ ಸೂಚಿಸಿದೆ.

ಪಾಲಿಕೆಯ ಕಂದಾಯ ಪರಿವೀಕ್ಷಕರಾದ ಶ್ರೀ.ಸುರೇಶ್ ಹಾಗೂ ಕಂದಾಯ ವಸೂಲಿಗಾರರಾದ ಶ್ರೀ.ಸೋಮಶೇಖರ್ ರವರು ಹೊಸದಾಗಿ ನಿರ್ಮಾಣ ಮಾಡುತ್ತಿರುವ ಶಾಪೀಂಗ್ ಕಾಂಪ್ಲೆಕ್ಸ್ ನ ಹತ್ತಿರವಿರುವ ವಾರ್ಡ್ ಕಛೇರಿಗೆ ಸೂಕ್ತ ಶೌಚಾಲಯವನ್ನು ವ್ಯವಸ್ಥೆ ಮಾಡಲು ಹಾಗೂ ಶಾಪೀಂಗ್ ಕಾಂಪ್ಲೆಕ್ಸ್‌ನಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳನ್ನು ನಿಲ್ಲಿಸಲು ಕೋರಿಕೊಂಡಿರುತ್ತಾರೆ. ಈ ವಿಷಯದಲ್ಲಿ ಶೌಚಾಲಯ ನಿರ್ಮಾಣ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132ರವರಿಗೆ ಸಭೆ ಸೂಚಿಸಿದೆ. ಹಾಗೂ ಪೋಲೀಸ್ ಇಲಾಖೆಯು ಹೊಸದಾಗಿ ನಿರ್ಮಾಣ ಮಾಡುತ್ತಿರುವ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಕಾಲಕಾಲಕ್ಕೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಿ ಅನೈತಿಕ ಚಟುವಟಿಕೆಗಳನ್ನು ನಿಲ್ಲಿಸಲು ಕ್ರಮವಹಿಸಬೇಕೆಂದು ಪೋಲೀಸ್ ಇಲಾಖೆಯಲ್ಲಿ ಕೋರಿದೆ.

4. **<u>ಅರಣ್ಯ ವಿಭಾಗ:</u>** ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪೈ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ. ಏಕೆಂದರೆ ಮರಗಳು ರೆಂಬೆ ಕೊಂಬೆಗಳ ನೆರಳಿನಿಂದಾಗಿ ಬೀದಿ ದೀಪಗಳ ಬೆಳಕು ಸರಿಯಾಗಿ ಬೀಳುತ್ತಿಲ್ಲವೆಂದು ಈ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ. ಇದರ ಕುರಿತ್ತಾಗಿ ದಕ್ಷಿಣ ವಲಯದ ಅರಣ್ಯಾಧಿಕಾರಿಗಳೂ ಕ್ರಮವಹಿಸಲು ಕೋರಲಾಗಿರುತ್ತದೆ. ಮತ್ತೊಮ್ಮೆ ಸದರಿ ಸದಸ್ಯರು ಕ್ರಮವಹಿಸಲು ಕೋರಿಕೊಂಡಿರುತ್ತಾರೆ. ಕಳೆದ 3 ಸಭೆಗಳಿಂದ ತೆರವುಗೊಳಿಸಲು ಕೊರಿಕೊಂಡಿರುತ್ತಾರೆ. ಆದ್ದರಿಂದ ಗಿಡಮರಗಳ ಕೊಂಬೆಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ

05/12/2020

ಮುಚ್ಚಲು ಗುತ್ತಿಗೆ ಪಡೆದ ಗುತ್ತಿಗೆದಾರರು ಮತ್ತು ವಾರ್ಡ್‌ನಲ್ಲಿರುವ ಎಲ್ಲಾ ರಸ್ತೆಗುಂಡಿಗಳನ್ನು ಕಾಲಕಾಲಕ್ಕೆ ಮುಚ್ಚಲು ಸಭೆಯು ಸೂಚಿಸಿದೆ.

9. **BWSSB** ಇಲಾಖೆಯವರು ವಾರ್ಡ್ ಮಟ್ಟದಲ್ಲಿ ಮಣ್ಣನ್ನು ಅಗೆದು ಹಾಗೆ ಬಿಟ್ಟಿರುವುದನ್ನು ತಿಳಿಸಲಾಗಿರುತ್ತದೆ. ಆದ್ದರಿಂದ ಸದರಿ ಇಲಾಖೆಯ ಸಹಾಯಕ ಅಭಿಯಂತರರಾದ ಕೃಷ್ಣಪ್ಪ ರವರು ಹಾಜರಾಗಿ ತಮ್ಮ ಇಲಾಖೆಯ ಎಲ್ಲಾ ಕಾರ್ಯಗಳನ್ನು ಮತ್ತು ಸಾರ್ವಜನಿಕರ ದೂರುಗಳನ್ನು ಆಲಿಸಿ ಆಗಿಂದಾಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

10. **ತೆರಿಗೆ:** ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು ಆದರೆ ಕಂದಾಯದ ವಿವರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಕಂದಾಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಸಂಗ್ರಹವಾಗುವ ತೆರಿಗೆ ವಿವರವನ್ನು ಸಭೆಗೆ ಸಲ್ಲಿಸಲು ಸೂಚಿಸಿದೆ.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರೆತಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಅಧ್ಯಕ್ಷರು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

05/12/2020

**ನೋಡೆಲ್ ಅಧಿಕಾರಿ**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ

**ಕಾರ್ಯದರ್ಶಿಗಳು**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ

ಶ್ರೀ.ಸಿ.ಹೆಚ್.ಪೈ ರವರನ್ನು ಸಂಪರ್ಕಿಸಿ ಅವರ ಸಲಹೆಯನ್ನು ಪಡೆದು ವಿಷಯದಲ್ಲಿ ಕ್ರಮವಹಿಸಬಹುದಾಗಿರುತ್ತದೆಂದು ಸಹಾಯಕ ಅರಣ್ಯಾಧಿಕಾರಿಗಳು(ದಕ್ಷಿಣ)ರವರನ್ನು ಕೋರಿದೆ.

5. **ವಾರ್ಡನಲ್ಲಿರುವ ಫುಟ್‌ಪಾತ್**:ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಹಾಗೂ ರಸ್ತೆಗುಂಡಿಗಳನ್ನು ಮುಚ್ಚಲು ಮತ್ತು ಅನಧೀಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಕ್ರಮಕೈಗೊಳ್ಳಲು ವಾರ್ಡ್ ಸಂಖ್ಯೆ:132ರ ಸಹಾಯಕ ಅಭಿಯಂತರರಿಗೆ ಸಭೆಯು ಸೂಚಿಸಲಾಯಿತು. ಮಾನ್ಯ ಆಯುಕ್ತರವರ ಆದೇಶದ ಮೇರೆಗೆ ವಾರ್ಡ್ ನಲ್ಲಿರುವ ಫುಟ್‌ಪಾತ್‌ಗಳನ್ನು ಮತ್ತು ಬೀದಿಗಳನ್ನು ಸರಿಪಡಿಸಲು ಅಂತಹ ಜಾಗಗಳನ್ನು ಗುರುತಿಸಿ ಸಭೆ ಗಮನಕ್ಕೆ ತರಲು ಕೋರಲಾಗಿದೆ.

6. **ಬೀದಿ ದೀಪಗಳ ನಿರ್ವಹಣೆ:** ಕುರಿತಂತೆ ಚರ್ಚಿಸಲಾಗಿ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ನ ಎದುರುಗಡೆ ಇರುವ ಪಾರ್ಕ್‌ನ ಸುತ್ತಮುತ್ತ ಬೀದಿ ದೀಪಗಳನ್ನು ಅಳವಡಿಸಲು ಶ್ರೀ.ಸಿ.ಹೆಚ್.ಪೈ ರವರು ಕೋರಿಕೊಂಡಿರುತ್ತಾರೆ. ಶ್ರೀ.ನಾರಾಯಣ ಅಧ್ಯಕ್ಷರು ಚಂದ್ರಾಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘರವರು 80 ಅಡಿ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕೋರಿಕೊಂಡಿರುತ್ತಾರೆ. ಇದರ ಕುರಿತ್ತಾಗಿ ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ದಕ್ಷಿಣ) ರವರು ಕ್ರಮವಹಿಸಲು ಕೋರಿದೆ. ಸದರಿ ನಾರಾಯಣ ರವರು ಆದರ್ಶ ಆರ್ಶೀವಾದ ಬೇಕರಿ ಹತ್ತಿರವಿರುವ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡಿ ಉರಿಯುವಂತೆ ಕ್ರಮವಹಿಸಲು ಕೋರಿಕೊಂಡಿರುತ್ತಾರೆ.

ಇದಲ್ಲದೇ ಪೊಲೀಸ್ ಸ್ಟೇಷನ್ ಪಕ್ಕದಲ್ಲಿ ರೋಡ್ ಬ್ಲಾಕ್ ಆಗಿರುವುದನ್ನು ತೆರವುಗೊಳಿಸಿ ಸಾರ್ವಜನಿಕರು ಮುಕ್ತವಾಗಿ ಸಂಚಾರ ಮಾಡಲು ಕ್ರಮಕರೂಗಿಸಲು ನಾರಾಯಣ ರಾವ್ ರವರು ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಚಂದ್ರಾ ಬಡಾವಣೆ ಪೊಲೀಸ್ ಸ್ಟೇಷನ್ಸ್ ರವರು ಕ್ರಮವಹಿಸಬೇಕೆಂದು ಸಭೆಯು ಕೋರಿದೆ.

7. **ಕಾನೂನು ಮತ್ತು ಸುವ್ಯವಸ್ಥೆ:** ಸಭೆಗೆ ಚಂದ್ರಾಬಡಾವಣೆ ಪೋಲಿಸ್ ಸ್ಟೇಷನ್ ನಿಂದ ಯಾವ ಅಧಿಕಾರಿಗಳು ಹಾಜರಾಗದೇ ಇರುವುದರಿಂದ ಮಾನ್ಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಾಬಡಾವಣೆ ರವರಿಗೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಕೋರಿದೆ.

8. **ರಸ್ತೆಯ ಗುಂಡಿ:** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಸಭೆಗೆ ರಸ್ತೆ ಗುಂಡಿಯನ್ನು ಮುಚ್ಚಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹಾಜರಾಗಿರುವುದಿಲ್ಲ. ಮಾನ್ಯ ಆಯುಕ್ತರು ಈಗಾಗಲೇ ರಸ್ತೆ ಗುಂಡಿಗಳಲ್ಲಿ ಸಾರ್ವಜನಿಕರು ಬಿದ್ದು ಅಪಘಾತ ಉಂಟಾಗಿ ಗಾಯಾಳುಗಳಾಗಿ ಸಾವು ಉಂಟಾದ್ದಲ್ಲಿ ಪರಿಹಾರ ನೀಡಲಾಗುವುದೆಂದು ಪ್ರಕಟಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:132 ಮತ್ತು ರಸ್ತೆ ಗುಂಡಿಗಳನ್ನು